ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.**

**Office of the Deputy Commissioner, Chamarajanagar District, Chamarajanagar.**

**Phone No. 08226-223160, 08226-223170, Fax: 08226- 223180 E-mail deo.cnagar @gmail com**

ಸಂ:ಉನಿಚಾ:ಮಮಅ:ಮಿಶಯೋ:ಅಆವೆ:2024-25/1723 ದಿನಾಂಕ 10-06-2024

ರವರಿಗೆ,

ನಿರ್ದೇಶಕರು, (ಐ.ಟಿ) ಮತ್ತು
ಜಿಲ್ಲಾ ಸೂಚನಾ ವಿಜ್ಞಾನಾಧಿಕಾರಿಗಳು,
ರಾಷ್ಟ್ರೀಯ ವಿಜ್ಞಾನ ಕೇಂದ್ರ,
ಚಾಮರಾಜನಗರ

ಮಾನ್ಯರೆ,

ವಿಷಯ: ಮಿಷನ್ ಶಕ್ತಿ ಯೋಜನೆಯಡಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಚಾಮರಾಜನಗರ ಇಲ್ಲಿಗೆ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲು ದಿನಾಂಕವನ್ನು ವಿಸ್ತರಿಸಿ ವೆಬ್‌ಸೈಟ್‌ನಲ್ಲಿ ಲಿಂಕ್‌ಅನ್ನು ತೆರೆಯುವಂತೆ ಕೋರಿ.

ಉಲ್ಲೇಖ: 1) ಸರ್ಕಾರದ ಆದೇಶ ಸಂ:ಮಮಇ:219:ಮಮಅ:2023 ಬೆಂಗಳೂರು ದಿನಾಂಕ 25-10-2023
2) ಸಂ:ಉನಿಚಾ:ಮಮಅ:ಮಿಶಯೋ:ಪ್ರಕಟಣೆ:2023-24:1052 ದಿನಾಂಕ 23-02-2024
3) ಸಂ:ಉನಿಚಾ:ಮಮಅ:ಮಿಶಯೋ:ಅಆವೆ:2023-24 ದಿನಾಂಕ 22-03-2024

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಉಲ್ಲೇಖದ ಆದೇಶದನ್ವಯ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕ(DHEW)ಕ್ಕೆ ವಿದ್ಯಾರ್ಹತೆ, ಮಾಸಿಕ ಸಂಚಿತ ಸಂಭಾವನೆ/ವೇತನ/ಗೌರವಧನ (Consolidated Salary) ಅನ್ವಯಿಸಿದಂತೆ ಸಿಬ್ಬಂದಿಗಳನ್ನು ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದ್ದು, ಅದರಂತೆ ಉಲ್ಲೇಖ (2)ರಲ್ಲಿ ಸದರಿ ಹುದ್ದೆಗಳ ನೇಮಕಾತಿ ಸಂಬಂಧ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲು ವೆಬ್‌ಸೈಟ್‌ನ್ನು ತೆರೆದು ಪ್ರಕಟಿಸಲಾಗಿತ್ತು. ನಂತರ ಸಾರ್ವತ್ರಿಕ ಲೋಕಸಭಾ ಚುನಾವಣಾ-2024ರ ನೀತಿ ಸಂಹಿತೆ ಜಾರಿಯಾಗಿದ್ದುದರಿಂದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಲಿಂಕ್‌ನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಉಲ್ಲೇಖ (3)ರಲ್ಲಿ ಕೋರಲಾಗಿತ್ತು.

ಪ್ರಸ್ತುತ ಲೋಕಸಭಾ ಸಾರ್ವತ್ರಿಕ ಚುನಾವಣಾ-2024ರ ನೀತಿ ಸಂಹಿತೆ ತೆರವಾಗಿರುವುದರಿಂದ ಸದರಿ ಹುದ್ದೆಗಳ ನೇಮಕಾತಿ ಸಂಬಂಧ ದಿನಾಂಕ 14-06-2024ರಿಂದ 29-06-2024ರವರೆಗೆ ವಿಸ್ತರಿಸುವ ಸಲುವಾಗಿ ವೆಬ್‌ಸೈಟ್‌ನಲ್ಲಿ ಲಿಂಕ್‌ಅನ್ನು ಮರುತೆರೆಯುವಂತೆ ತಮ್ಮಲ್ಲಿ ಕೋರಲಾಗಿದೆ.

ಮುಂದುವರೆದು ಈ ಹಿಂದೆ ಸದರಿ ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸಿದವರನ್ನು ಹೊರತುಪಡಿಸಿ, ಈಗ ಅರ್ಜಿ ಸಲ್ಲಿಸಲು ದಿನಾಂಕ 14-06-2024 ರಿಂದ 29-06-2024 ರವರೆಗೆ ವಿಸ್ತರಣೆ ಮಾಡಿರುವುದರಿಂದ ದಿನಾಂಕ 29-06-2024 ಕ್ಕೆ 18-45 ವರ್ಷ ಮೀರದ ವಯೋಮಾನದವರು ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ತಮ್ಮ ವಿಶ್ವಾಸಿ,

ಉಪ ನಿರ್ದೇಶಕರು
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾ,
ಚಾಮರಾಜನಗರ

WCD-2:M: Mission Shakthi